ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ತುಂಗಭದ್ರಾ ನದಿ ತಟದಲ್ಲಿರುವ 'ಮಂತ್ರಾಲಯ' ಧಾರ್ಮಿಕ ಶ್ರದ್ಧಾ ಕೇಂದ್ರವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲಾರಂಭಿಸಿದೆ. ಮಠದಲ್ಲಿ ಹಲವು ಯತಿಗಳು ಆಗಿ ಹೋದರೂ ದೇಶ ವಿದೇಶಗಳಲ್ಲಿರುವ ಭಕ್ತರು 'ಮಂತ್ರಾಲಯ'ವನ್ನು ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಪವಿತ್ರ ವಾಸಸ್ಥಾನವೆಂದೇ ನಂಬಿರುವ ಕಾರಣ ಇಲ್ಲಿಗೆ ಬರುವ ಭಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ.

ಮಂತ್ರಾಲಯ ಈಗ ಬಹಳಷ್ಟು ಬದಲಾಗಿದೆ. ರಾಷ್ಟ್ರೀಯ ಹೆದ್ದಾರಿಯಿಂದ (167) ಮಂತ್ರಾಲಯ ಮಠದವರೆಗೂ ರಸ್ತೆಗಳು ವಿಸ್ತಾರಗೊಂಡು ಸಂಚಾರ ಸುಲಲಿತವಾಗಿದೆ. ಗಿಡಮರಗಳು ಬೆಳೆದು ನಿಂತು ನೆರಳು ಚೆಲ್ಲುತ್ತಿವೆ. ಅಪಾರ ಸಂಖ್ಯೆಯಲ್ಲಿ ಹರಿದು ಬರುವ ಭಕ್ತರು ಉಳಿದುಕೊಳ್ಳಲು ಬಹುಮಹಡಿ ಕಟ್ಟಡಗಳು ಹಾಗೂ ವಸತಿಗೃಹಗಳು ತಲೆ ಎತ್ತಿವೆ. ರಾಯರ ವೃತ್ತದಲ್ಲಿ ಯತಿಗಳ ಹೊಸ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿ ವೃತ್ತದ ಸೌಂದರ್ಯ ಹೆಚ್ಚಿಸಲಾಗಿದೆ.


ಮಠದ ಆವರಣದಲ್ಲಿ ಬೃಹತ್ ರಂಗೋಲಿಯ ಚಿತ್ತಾರ ಮೂಡಿಸಲಾಗಿದೆ. ಆವರಣದ ಎರಡೂ ಬದಿಗೂ ಭಿತ್ತಿಯ ಮೇಲೆ ವಿಷ್ಣುವಿನ ವಿಭಿನ್ನ ಅವತಾರಗಳನ್ನು ಉಬ್ಬು ಕಲೆಯಲ್ಲಿ ಅನಾವರಣಗೊಳಿಸಲಾಗಿದೆ. ಹೈಮಾಸ್ಟ್ ದೀಪಗಳು ಹಾಗೂ ರಾತ್ರಿ ವೇಳೆಯಲ್ಲಿ ಝುಗಮಗಿಸುವ ಆಲಂಕಾರಿಕ ವಿದ್ಯುತ್ ದೀಪಗಳು ಭಕ್ತರನ್ನು ಬೆರಗುಗೊಳಿಸುತ್ತಿವೆ. ಭಕ್ತಸಮೂಹದ ಮಧ್ಯೆ ಇವೆಲ್ಲವನ್ನು ನೋಡುತ್ತ ನಿಂತರೆ ದೇವಲೋಕವನ್ನೇ ಸೃಷ್ಟಿಸಿದಂತೆ ಭಾಸವಾಗುತ್ತದೆ.

ಆಗಸ್ಟ್ 10, 11 ಹಾಗೂ 12ರಂದು ನಡೆಯಲಿರುವ ಭಕ್ತರ ಆರಾಧ್ಯದೈವ ಶ್ರೀ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ ಪ್ರಯುಕ್ತ ಮಂತ್ರಾಲಯದಲ್ಲಿ ಸಂಭ್ರಮ ನೆಲೆಯೂರಿದೆ. ರಾಯರ ಮಠದ ಆವರಣದಲ್ಲಿನ ಆಧ್ಯಾತ್ಮಿಕ ವಾತಾವರಣ ಭಕ್ತರನ್ನು ಪುಳಕಿತಗೊಳಿಸಿದೆ.

### ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆದ ಮಠ

ಲಕ್ಷಾಂತರ ಭಕ್ತ ಸಮೂಹವನ್ನು ಹೊಂದಿರುವ ಆಂಧ್ರಪ್ರದೇಶದ ಗಡಿಯಲ್ಲಿರುವ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠವು ದೇಶ ವಿದೇಶಗಳಲ್ಲೂ ತನ್ನ ಕಾರ್ಯವನ್ನು ವಿಸ್ತರಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಛಾಪು ಮೂಡಿಸ ತೊಡಗಿದೆ.





ಮಂತ್ರಾಲಯದಲ್ಲಿ ಪ್ರತಿಷ್ಠಾಪಿಸಲಾಗಿರುವ ಅಭಿರಾಮನ ಶಿಲಾ ಮೂರ್ತಿ

## 108 ಅಡಿ ಎತ್ತರದ ಶ್ರೀರಾಮನ ಪಂಚಲೋಹದ ಮೂರ್ತಿ

ಮಂತ್ರಾಲಯದ ಶ್ರೀಮಠದಿಂದ 2 ಕಿ.ಮೀ ಅಂತರದಲ್ಲಿರುವ ಎಮ್ಮಿಗನೂರಿನಲ್ಲಿ ಹೈದರಾಬಾದ್‌ನ ಜೈಶ್ರೀರಾಮ ಫೌಂಡೇಷನ್ 300 ಕೋಟಿ ವೆಚ್ಚದಲ್ಲಿ 10 ಎಕರೆ ಪ್ರದೇಶದಲ್ಲಿ ದೇಶದ ಅತಿದೊಡ್ಡ ಪಂಚಲೋಹದ 108 ಅಡಿ ಎತ್ತರದ ಶ್ರೀರಾಮನ ಪ್ರತಿಮೆ ಹಾಗೂ ಥೀಮ್ ಪಾರ್ಕ್ ನಿರ್ಮಾಣ ಮಾಡಲು ಸಂಕಲ್ಪ ಮಾಡಿದೆ.

ಶ್ರೀರಾಮನು ಸೀತಾದೇವಿಯನ್ನು ಹುಡುಕಲು ಲಂಕೆಗೆ ಹೋಗುತ್ತಿದ್ದಾಗ ತುಂಗಭದ್ರೆಯ ತಟದಲ್ಲಿಯೇ ಆಶ್ರಯ ಪಡೆದಿದ್ದ ಎಂದು ಪುರಾಣ ಹೇಳುತ್ತದೆ. ಮಂತ್ರಾಲಯದ ಯತಿಗಳೆಲ್ಲರೂ ಮೂಲ ರಾಮದೇವರ ಆರಾಧಕರೇ ಆಗಿದ್ದಾರೆ. ಮರ್ಯಾದಾ ಪುರುಷೋತ್ತಮನ ಪಾದಸ್ಪರ್ಶದಿಂದ ಪಾವನಗೊಂಡಿರುವ ನೆಲದಲ್ಲಿ ಪಂಚಲೋಹದ ಮೂರ್ತಿಯೊಂದು ಪ್ರತಿಷ್ಠಾಪನೆಗೊಳ್ಳುತ್ತಿರುವುದರಿಂದ ಐತಿಹಾಸಿಕ ಮಹತ್ವ ಪಡೆದುಕೊಳ್ಳಲಿದೆ.

2023ರ ಜುಲೈ 23ರಂದು ಮಂತ್ರಾಲಯದಲ್ಲಿ ಶ್ರೀರಾಮನ ಪ್ರತಿಮೆ ಸ್ಥಾಪನೆಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಮಂತ್ರಾಲಯ ಮಠದ ಮಠಾಧೀಶ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿಕೊಟ್ಟಿದ್ದಾರೆ. ಈ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಆಂಧ್ರಪ್ರದೇಶದ ತಿರುಮಲ ತಿರುಪತಿ ದೇವಸ್ಥಾನ, ವರಾಹ ಲಕ್ಷ್ಮೀನರಸಿಂಹ ಸ್ವಾಮಿ. ಉತ್ತರಪ್ರದೇಶದ ವಾರಾಣಸಿ, ಉತ್ತರಾಖಂಡದ ಬದರಿನಾಥ, ಕೇರಳದ ಅನಂತ ಪದ್ಮನಾಭ ಸ್ವಾಮಿ, ತೆಲಂಗಾಣದ ಬಾಸರದಾ ಶ್ರೀಜ್ಞಾನ ಸರಸ್ವತಿ, ಮೇಲುಕೋಟೆ ಚೆಲುವನಾರಾಯಣ ಸ್ವಾಮಿ, ತಮಿಳುನಾಡಿನ ಮುಶನಂ ವರಾಹಸ್ವಾಮಿ, ಮಹಾರಾಷ್ಟ್ರದ ಪಂಢರಪುರದ ವಿಠ್ಠಲ ರುಕ್ಮಾಯಿ ಮಂದಿರಗಳ ಮಾದರಿ ದೇಗುಲ ನಿರ್ಮಾಣದ ಪ್ರಸ್ತಾಪ ಇದೆ. ಶ್ರೀ ರಾಘವೇಂದ್ರ ಸ್ವಾಮಿಗಳ ಮಠವು 10 ಎಕರೆ ಜಾಗವನ್ನು ರಾಮಮಂದಿರ ನಿರ್ಮಾಣಕ್ಕಾಗಿಯೇ ದೇಣಿಗೆ ನೀಡಿದೆ.

## ಶ್ರೀರಾಮನ ಶಿಲಾಮೂರ್ತಿ

ಮಂತ್ರಾಲಯದಿಂದ 2 ಕಿ.ಮೀ ಅಂತರದಲ್ಲಿ ರಾಯಚೂರು ಮಾರ್ಗದಲ್ಲಿ 35 ಅಡಿ ಎತ್ತರದ ಶ್ರೀರಾಮನ ಶಿಲಾಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಶ್ರೀ ಸತ್ಯಸಾಯಿ ಜಿಲ್ಲೆಯ ರೊಳ್ಳ ಮಂಡಲದ ಕೊಡಗರ್ಲಗುಟ್ಟ ಪ್ರದೇಶದಿಂದ ಒಂದೇ ಕಲ್ಲನ್ನು ಖರೀದಿಸಿ ಏಕಶಿಲೆಯಲ್ಲಿ ಡಿಜಿಟಲ್ ತಂತ್ರಜ್ಞಾನ ಬಳಸಿ ಮೂರ್ತಿ ಕೆತ್ತನೆ ಮಾಡಲಾಗಿದೆ.